ಚುಕ್ಕೆ ಗುರುತಿಲ್ಲದ ದಿನಾಂಕ 24.3.2022 184

**ಕರ್ನಾಟಕ ವಿಧಾನಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

ವಿಷಯ:

ಸಾಂಸ್ಕೃತಿಕ ಮತ್ತು ಅರಮನೆಗಳ ನಗರಿ ಮೈಸೂರಿನಲ್ಲಿ ಚಿತ್ರ ನಗರಿ (ಫಿಲ್ಮ್ ಸಿಟಿ) ನಿರ್ಮಿಸಲು ಈ ಹಿಂದಿನ ನಿಕಟಪೂರ್ವ ಮಾನ್ಯ ಮುಖ್ಯ ಮಂತ್ರಿಯವರಾದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪರವರು ಘೋಷಣೆಯನ್ನು ಮಾಡಿದ್ದರು ಮತ್ತು ಸುಮಾರು ರೂ.500 ಕೋಟಿಗಳ ಅನುದಾನವನ್ನು ಸಹ ಇಟ್ಟಿದ್ದರು. ಆದರೆ ಈ ಚಿತ್ರ ನಗರಿ ಯೋಜನೆಯನ್ನು ರೂಪಿಸಲು ಸರ್ಕಾರ ಇಲ್ಲಿಯ ತನಕ ವಿಳಂಬ ಮಾಡಿಕೊಂಡು ಬಂದಿದೆ. ಮೈಸೂರು ನಗರ ಪ್ರವಾಸೋದ್ಯಮ ಹಬ್ ಸಿಟಿಯಾಗಿದೆ. ವಿಶ್ವ ವಿಖ್ಯಾತ ಸುಪ್ರಸಿದ್ಧ ನಾಡ ಹಬ್ಬ ದಸರಾ ಹಬ್ಬವು ದೇಶ ವಿದೇಶಗಳಿಂದ ಪ್ರವಾಸಿಗರನ್ನು ಸೂಜಿಗಣ್ಣಿನಂತೆ ಸೆಳೆಯುತ್ತದೆ. ಮೈಸೂರು ಮತ್ತು ಮೈಸೂರಿನ ಸುತ್ತ ಮುತ್ತಲಿನ ಅನೇಕ ಪ್ರವಾಸಿ ತಾಣಗಳು ಜನಮನ ಸೆಳೆಯುವುದರೊಂದಿಗೆ ವಿದೇಶಿಗರನ್ನು ಆಕರ್ಷಿಸುತ್ತಿದೆ. ಇಂತಹ ವಾತಾವರಣವಿರುವ ಮೈಸೂರಿಗೆ ಚಿತ್ರನಗರಿ ನಿರ್ಮಿತವಾದರೆ ಮೈಸೂರಿನ ಮುಕುಟಕ್ಕೆ ಗರಿಯೇರಿಸಿದಂತಾಗುತ್ತದೆ. ಆದ್ದರಿಂದ ಮೈಸೂರು ನಗರದಲ್ಲಿಯೇ ಈ ಚಿತ್ರನಗರಿಯನ್ನು ನಿರ್ಮಾಣ ಮಾಡಬೇಕಾಗಿದೆ. ಆದ ಕಾರಣ, ಈಗಲಾದರೂ ಸರ್ಕಾರ ಮೀನಮೇಷ ಎಣಿಸದೆ, ಚಿತ್ರನಗರಿ ಸ್ಥಾಪನೆಗೆ ಬೇಕಾದ ಅಗತ್ಯ ಕ್ರಮಗಳಾದ ಭೂಮಿಯನ್ನು ಎಲ್ಲಿ ಎಂದು ಗುರುತಿಸಿ, ಭೂ ಸ್ವಾಧೀನಪಡಿಸಿಕೊಂಡು, ಇದಕ್ಕೆ ಬೇಕಾಗುವ ಎಲ್ಲಾ ಪ್ರಕ್ರಿಯೆಗಳನ್ನು ಪ್ರಾರಂಭಗೊಳಿಸಿ, ಕೂಡಲೇ ಈ ಕಾರ್ಯಕ್ಕೆ ಚಾಲನೆ ನೀಡಬೇಕಾಗಿದೆ. 2022ರ ಚಲನ ಚಿತ್ರೋತ್ಸವದ ಸವಿನೆನಪಿಗಾದರೂ ಸಹ ಭೂಮಿ ಪೂಜೆಯನ್ನು ನೆರವೇರಿಸಬೇಕು ಎಂದು ನಾನು ಮೈಸೂರು-ಚಾಮರಾಜನಗರ ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಶಾಸಕನಾಗಿ, ಅಲ್ಲಿನ ಜನತೆಯ ಪರವಾಗಿ ರಾಜ್ಯದ ಜನತೆಯ ಇಚ್ಛೆಯಂತೆ ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ:

**ಉತ್ತರ:**

2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪಿ.ಪಿ.ಪಿ. ಮಾದರಿಯಲ್ಲಿ ವಾರ್ತಾ ಇಲಾಖೆಯು ವತಿಯಿಂದ ಮೈಸೂರಿನಲ್ಲಿ ಚಲನಚಿತ್ರ ನಗರಿಯನ್ನು ನಿರ್ಮಿಸಲಾಗುವುದೆಂದು ಘೋಷಿಸಲಾಗಿತ್ತು. ಅದರಂತೆ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ. 90 ಎಲ್.ಜಿ.ಎಂ. 2014 ದಿನಾಂಕ: 17-10-2015 ರ ಪ್ರಕಾರ ಮೈಸೂರು ಜಿಲ್ಲೆ ನಂಜನಗೂಡು ತಾ: ಇಮ್ಮಾವು ಗ್ರಾಮದ ಸರ್ವೆ ನಂ.377 ಮತ್ತು ಇತರೆ ಸರ್ವೆ ನಂ.ಗಳಲ್ಲಿನ ಒಟ್ಟು 110-08 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾರುಕಟ್ಟೆ ಬೆಲೆಯ ಶೇ. 10ರಷ್ಟು ಗುತ್ತಿಗೆ ದರವನ್ನು ಹೆಚ್ಚಿಸುವ ಮತ್ತು ಪ್ರತಿ 2 ವರ್ಷಗಳಿಗೊಮ್ಮೆ ಶೇ. 5 ರಷ್ಟು ಬೆಲೆಯನ್ನು ಹೆಚ್ಚಿಸುವುದು ಹಾಗೂ ಇತರೆ ಷರತ್ತುಗಳನ್ನು ವಿಧಿಸಿ ಚಿತ್ರ ನಗರಿ ಸ್ಥಾಪಿಸುವುದಕ್ಕಾಗಿ ವಾರ್ತಾ ಇಲಾಖೆಗೆ ಮಂಜೂರು ಮಾಡಲಾಗಿದೆ. ನಂತರದಲ್ಲಿ ಚಿತ್ರ ನಗರಿಯನ್ನು ಪ್ರವಾಸೋದ್ಯಮ ಇಲಾಖೆಯು ಅಭಿವೃದ್ಧಿಪಡಿಸುವುದರಿಂದ ಚಿತ್ರ ನಿರ್ಮಾಣದ ಜೊತೆಗೆ ಪ್ರವಾಸೋದ್ಯಮ ಹೋಟೇಲು, ಮನೋರಂಜನೆ ಅಳವಡಿಸಿಕೊಂಡು ಸರ್ಕಾರದ ವತಿಯಿಂದ ಅಥವಾ ಪಿ.ಪಿ.ಪಿ. ಮಾದರಿಯಲ್ಲಿ ಅಭಿವೃದ್ಧಿಪಡಿಸಲು

ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಚಿತ್ರನಗರಿ ನಿರ್ಮಿಸುವ ಸಂಬಂಧ ಸಮಾಲೋಚಕ/ತಾಂತ್ರಿಕ ಸಲಹೆಗಾರ ಸಂಸ್ಥೆಯನ್ನಾಗಿ ಮೆ: ಇ ಅಂಡ್ ವೈ ಸಂಸ್ಥೆಯ ಸೇವೆಯನ್ನು ರೂ.203.00ಲಕ್ಷಗಳ ವೆಚ್ಚದಲ್ಲಿ ಪಡೆಯಲು ಕೆ.ಟಿ.ಪಿ.ಪಿ. ಕಾಯ್ದೆ ಕಲಂ 4ಜಿ ರಡಿ ವಿನಾಯಿತಿ ಪಡೆದು ಪ್ರವಾಸೋದ್ಯಮ ಇಲಾಖೆಯಿಂದ ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಸಂಸ್ಥೆಯು Inspection Report and Draft Feasibility Report ಸಿದ್ಧಪಡಿಸಿ ಪ್ರವಾಸೋದ್ಯಮ ಇಲಾಖೆಗೆ ನೀಡಿದ್ದು, ಇದಕ್ಕಾಗಿ ಸದರಿ ಸಂಸ್ಥೆಗೆ ಇಲ್ಲಿಯವರೆಗೆ ರೂ.36.75 ಲಕ್ಷಗಳನ್ನು ಪಾವತಿಸಲಾಗಿದೆ.

ಹಿಂದಿನ ನಿಕಟಪೂರ್ವ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು 2020-21ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 247ರಲ್ಲಿ ನಟನಾ ಕೌಶಲ್ಯಕ್ಕೆ ಪ್ರಸಿದ್ಧಿಯಾಗಿರುವ ಕರ್ನಾಟಕದಲ್ಲಿ ಜಾಗತಿಕ ಗುಣಮಟ್ಟದ ಫಿಲಂ ಸಿಟಿಯನ್ನು ಬೆಂಗಳೂರಿನಲ್ಲಿ ಒಟ್ಟು ರೂ.500.00ಕೋಟಿಗಳ ವೆಚ್ಚದಲ್ಲಿ ಖಾಸಗಿ ಸಹಭಾಗಿತ್ವದೊಂದಿಗೆ ಸ್ಥಾಪಿಸಲಾಗುವುದು ಎಂದು ಘೋಷಿಸಿರುತ್ತಾರೆ. ಬೆಂಗಳೂರಿನಲ್ಲಿ ಸೂಕ್ತ ಜಮೀನು ಲಭ್ಯವಾಗದ ಕಾರಣ, ಮೈಸೂರಿನಲ್ಲೇ ಚಿತ್ರನಗರಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಪಿ.ಪಿ.ಪಿ. ಮಾದರಿಯಲ್ಲಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದ್ದು, ಪ್ರವಾಸೋದ್ಯಮ ಇಲಾಖೆಯಿಂದ ಸದರಿ ಯೋಜನೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಹಿಂಪಡೆಯಲಾಗಿದೆ. ಚಿತ್ರನಗರಿಗಾಗಿ ಈಗಾಗಲೇ ಕಂದಾಯ ಇಲಾಖೆಯ ಆದೇಶ ಸಂಖ್ಯೆ: ಆರ್.ಡಿ. 90 ಎಲ್.ಜಿ.ಎಂ. 2014 ದಿನಾಂಕ: 17-10-2015 ರ ಪ್ರಕಾರ ಮೈಸೂರು ಜಿಲ್ಲೆ ನಂಜನಗೂಡು ತಾ: ಇಮ್ಮಾವು ಗ್ರಾಮದ ಸರ್ವೆ ನಂ.377 ಮತ್ತು ಇತರೆ ಸರ್ವೆ ನಂ.ಗಳಲ್ಲಿನ ಒಟ್ಟು 110-08 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರಾಗಿರುವುದರಿಂದ ಸದರಿ ಜಮೀನನ್ನು **ಉಚಿತವಾಗಿ** ನೀಡುವಂತೆ ಕೋರಿ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು , ಕಂದಾಯ ಇಲಾಖೆಯಲ್ಲಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕರ್ನಾಟಕದಲ್ಲಿ ಜಾಗತಿಕ ಗುಣಮಟ್ಟದ ಚಿತ್ರನಗರಿಯನ್ನು ಸಾರ್ವಜನಿಕ ಮತ್ತು ಖಾಸಗಿ ಸಹ ಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ ನಿರ್ಮಿಸಲು ಸರ್ಕಾರ ತನ್ನ ಪಾಲಿನ ಜಮೀನು ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಿದೆ. ಕೋವಿಡ್ ಹಾಗೂ ಇನ್ನಿತರೆ ಕಾರಣಗಳಿಂದಾಗಿ ಈ ಪ್ರಕ್ರಿಯೆ ವಿಳಂಬವಾಗಿದ್ದು, ಪ್ರಸ್ತುತ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕಂದಾಯ ಇಲಾಖೆಯಿಂದ ಮಂಜೂರಾಗಿರುವ ಜಮೀನನ್ನು ಉಚಿತವಾಗಿ ಹಸ್ತಾಂತರಿಸಿಕೊಳ್ಳುವ ಹಾಗೂ ಇತರೆ ಆಡಳಿತಾತ್ಮಕ ಕ್ರಮಗಳು ಪ್ರಗತಿಯಲ್ಲಿವೆ.

ಸಂಖ್ಯೆ: ಕೆಸಿಐ-ಪಿಐಪಿ/84/2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ